# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

## ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಸಂಖ್ಯೆ: ಕಸಂವಿ:ಅಧಿಸೂಚನೆ/ಎಂ.ಫಿಲ್/ಪರೀಕ್ಷೆ/01/2012–13 ದಿನಾಂಕ: 26.12.2012

## ಅಧಿಸೂಚನೆ

**ವಿಷಯ: 2012–13ನೇ ಸಾಲಿನಲ್ಲಿ ನಡೆಯುವ ಎಂ.ಫಿಲ್ (ವಿಶಿಷ್ಟಾಚಾರ್ಯ) ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

| ಅಭ್ಯರ್ಥಿಗಳು ಅರ್ಜಿಗಳನ್ನು ಪಡೆಯುವ ದಿನಾಂಕ | ಅಭ್ಯರ್ಥಿಗಳಿಂದ ಬ್ಯಾಂಕ್ ಹುಂಡಿ ಸಮೇತ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ |
|---|---|
| **01.01.2013 ರಿಂದ 08.01.2013** | **08.01.2013** |

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2012–13ರಲ್ಲಿ ನೋಂದಾಯಿಸಿಕೊಂಡಿರುವ ಎಂ.ಫಿಲ್ (ವಿಶಿಷ್ಟಾಚಾರ್ಯ) ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

2. ಪರೀಕ್ಷಾ ಶುಲ್ಕದ ಹುಂಡಿಯನ್ನು (ಡಿ.ಡಿ.) ನಿಗದಿತ ದಿನಾಂಕದಂದು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Sanskrit University, Bangalore)"** ಈ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. **ಅಥವಾ** ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚಾಮರಾಜಪೇಟೆ ಶಾಖೆ, ಬೆಂಗಳೂರು ಈ ಬ್ಯಾಂಕಿನ ಉಳಿತಾಯ **ಖಾತೆ ಸಂಖ್ಯೆ: 64069994360** ಈ ಖಾತೆಗೆ ಹಣವನ್ನು ಜಮಾ ಮಾಡಿ ಚಲನ್ ಅನ್ನು ವಿಶ್ವವಿದ್ಯಾಲಯಕ್ಕೆ ನೀಡುವುದು.

3. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

4. **ಪತ್ರಿಕೆ – I 'ಭಾರತೀಯ ಗ್ರಂಥ ಸಂಪಾದನ ಶಾಸ್ತ್ರ ಪ್ರವೇಶಿನೀ'** ಮತ್ತು **'ಅನುಸಂಧಾನಸ್ಯ ಪ್ರವಿಧಿಃ–ಪ್ರಕ್ರಿಯಾ' ಪಠ್ಯಪುಸ್ತಕಗಳನ್ನು ಆಧರಿಸಿರುತ್ತದೆ.**

   **ಪತ್ರಿಕೆ – II ಎಂ.ಎ. ಸಂಸ್ಕೃತ/ವಿದ್ವದುತ್ತಮಾ ಪಠ್ಯಕ್ರಮಕ್ಕೆ ಅನುಗುಣವಾಗಿ ನಡೆಯುತ್ತದೆ.**

5. ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ಅಭ್ಯರ್ಥಿಗಳು ಇತ್ತೀಚಿನ ಎರಡು ಭಾವಚಿತ್ರಗಳನ್ನು ನೀಡಬೇಕು. ಒಂದನ್ನು ಅರ್ಜಿಗೆ ಲಗತ್ತಿಸಿ ಮತ್ತೊಂದನ್ನು ದೃಢೀಕರಿಸಿ ಸಲ್ಲಿಸುವುದು.

6. ಪರೀಕ್ಷಾ ಶುಲ್ಕ ವಿವರ ಇಂತಿದೆ:

| ಕ್ರ. ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ |
|---|---|---|
| 1. | ಎಂ.ಫಿಲ್(ವಿಶಿಷ್ಟಾಚಾರ್ಯ) | 1000.00 |

7. ಎಂ.ಫಿಲ್(ವಿಶಿಷ್ಟಾಚಾರ್ಯ) ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಕನಿಷ್ಠ 75% ಹಾಜರಾತಿಯನ್ನು ಹೊಂದಿರಬೇಕು.

8. ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಪತ್ರಿಕೆಗೆ 80 ಅಂಕಗಳನ್ನು ನಿಗದಿಪಡಿಸಲಾಗಿದೆ. ಇನ್ನುಳಿದ 20 ಅಂಕಗಳನ್ನು ಆಂತರಿಕ ಮೌಲ್ಯ ಮಾಪನಕ್ಕೆ ನಿಗದಿಪಡಿಸಲಾಗಿದ್ದು, ಅವುಗಳಲ್ಲಿ 10 ಅಂಕಗಳನ್ನು ಪೂರ್ಣ ಹಾಜರಾತಿಗೂ, ಇನ್ನುಳಿದ 10 ಅಂಕಗಳನ್ನು (2) ಪ್ರಬಂಧಮಂಡನೆಗೂ ನಿಗದಿಪಡಿಸಲಾಗಿದೆ.

9. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಶೇ 50% ವಿನಾಯ್ತಿ ನೀಡಲಾಗಿದೆ. ವಿನಾಯ್ತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣಪತ್ರಗಳನ್ನು ನೀಡದಿದ್ದರೆ ಶುಲ್ಕದಿಂದ ವಿನಾಯ್ತಿ ನೀಡಲಾಗುವುದಿಲ್ಲ.

**ಕುಲಸಚಿವರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು